2019 ಕ.ತೀ.ವ 816

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೃಷ್ಣ ಎಸ್. ದೀಕ್ಷಿತ್

## ಹೆಚ್.ಜೆ. ಪೂರ್ಣಚಂದ್ರ –ವಿರುದ್ಧ– ದಾವಣಗೆರೆ ವಿಶ್ವವಿದ್ಯಾನಿಲಯ ಮತ್ತು ಇನ್ನೊಬ್ಬರು*

ಭಾರತ ಸಂವಿಧಾನದ 226ನೇ ಅನುಚ್ಛೇದದ ಅಡಿಯಲ್ಲಿನ ರಿಟ್ ಅರ್ಜಿ.

ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000ರ 2(12)ನೇ ಪ್ರಕರಣ.

ಸಹಾಯಕ ಗ್ರಂಥಪಾಲರಾಗಿ ಯು.ಜಿ.ಸಿ. ವೇತನ ಶ್ರೇಣಿಗಳಲ್ಲಿ ಆಯ್ಕೆ ದರ್ಜೆ ಕೇಡರ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಜಿದಾರರು, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000ದಲ್ಲಿ ಗೊತ್ತುಪಡಿಸಲಾದ 60 ವರ್ಷಗಳ ವಯಸ್ಸು ಏನೇ ಇರಲಿ, ಯು.ಜಿ.ಸಿ. ನಿಯಮಾವಳಿಗಳ ಪ್ರಕಾರ, ಪ್ರತ್ಯರ್ಜಿದಾರ–ವಿಶ್ವವಿದ್ಯಾನಿಲಯದ ಸೇವೆಯಲ್ಲಿ 62 ವರ್ಷಗಳ ವಯಸ್ಸನ್ನು ತಲುಪುವವರೆಗೆ ಮುಂದುವರಿಯಲು ಅರ್ಹರಾಗಿದ್ದಾರೆ ಎಂಬುದು ಈ ರಿಟ್ ಅರ್ಜಿಗಳಲ್ಲಿ ಹೇಳಿದ ಮೊಕದ್ದಮೆಯ ಸಂಕ್ಷಿಪ್ತ ಸಂಗತಿಯಾಗಿದೆ.

ಅರ್ಜಿದಾರರು ಗ್ರಂಥಪಾಲರಾಗಿರುವುದರಿಂದ ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ಇದರ 2(12)ನೇ ಪ್ರಕರಣದ ಮೇರೆಗೆ "ಶಿಕ್ಷಕ" ಪದದ ಪರಿಭಾಷೆಯಲ್ಲಿ ಬರುವುದಿಲ್ಲ; ಅನುಬಂಧ–ಸಿ ಯಲ್ಲಿನ 1998ರ ಸರ್ಕಾರಿ ಆದೇಶವನ್ನು ಪೂರ್ವದ ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ, 1976ರ ಮೇರೆಗೆ ನೀಡಲಾಗಿದ್ದು, 2000ದ ಹೊಸ ಅಧಿನಿಯಮದ ಮೇರೆಗೆ "ಶಿಕ್ಷಕ" ಪದದ

*ರಿಟ್ ಅರ್ಜಿ ಸಂಖ್ಯೆ: 13051/2016 (ಎಸ್–ಆರ್) ಇತರೆ, ದಿನಾಂಕ 23ನೇ ನವೆಂಬರ್, 2018.

ಪರಿಭಾಷೆಯನ್ನು ವಿಸ್ತರಿಸಲು ಅದನ್ನು ಅವಲಂಬಿಸಲಾಗದು ಎಂದು ಹೇಳಿ ಪ್ರತಿವಾದಿಗಳು ರಿಟ್ ಅರ್ಜಿಗಳನ್ನು ವಿರೋಧಿಸಿದ್ದಾರೆ.

ಎಮ್. ಪದ್ಮನಾಭನ್ ನಾಯರ್ ಮೊಕದ್ದಮೆಯ ಹಿನ್ನಲೆಯಲ್ಲಿ, ನಿವೃತ್ತಿ ವಯಸ್ಸಿಗೆ ಸಂಬಂಧಿಸಿದಂತೆ ರಿಟ್ ಅರ್ಜಿಗಳಲ್ಲಿ ಕೋರಿರುವ ಮುಖ್ಯ ಪರಿಹಾರವನ್ನು ನಿರಾಕರಿಸಲಾಗಿದೆಯಾದರೂ, ಈ ತೀರ್ಪಿನ ಪ್ರತಿ ಲಭ್ಯವಾಗುವಂತೆ ಮಾಡಿದ ದಿನಾಂಕದಿಂದ ಎರಡು ತಿಂಗಳುಗಳ ಅವಧಿಯನ್ನು ಮೀರಿದ ಸಮಯ ಮಿತಿಯೊಳಗೆ ಅರ್ಜಿದಾರರ ಸೇವಾಂತ ಲಾಭಗಳನ್ನು ಇತ್ಯರ್ಥಗೊಳಿಸಲು ವಿಶ್ವವಿದ್ಯಾನಿಲಯವು ಹೊಣೆಯುಳ್ಳದ್ದಾಗಿದೆ. ವಿಳಂಬಕ್ಕೆ ಎಡೆ ಮಾಡಿಕೊಟ್ಟರೆ, ತರುವಾಯದಲ್ಲಿ ಅರ್ಜಿದಾರರಿಗೆ ಸಂದಾಯ ಮಾಡಲಾಗುವ ಮೊತ್ತದ ಮೇಲೆ ಮಾಸಿಕ ಶೇಕಡ 2ರ ದರದಲ್ಲಿ ಬಡ್ಡಿಯೊಂದಿಗೆ ಹಣ ಸಂದಾಯ ಮಾಡಲು ಪ್ರತಿವಾದಿ–ವಿಶ್ವವಿದ್ಯಾನಿಲಯವನ್ನು ಅಗತ್ಯಪಡಿಸಲಾಗುವುದು ಮತ್ತು ಅದನ್ನು ವಿಳಂಬಕ್ಕೆ ಹೊಣೆಗಾರನಾದ ತಪ್ಪು ಮಾಡಿದ ಅಧಿಕಾರಿಯಿಂದ ವಸೂಲು ಮಾಡಿಕೊಳ್ಳಬಹುದಾಗಿರತಕ್ಕದ್ದು ಎಂದು ನಿರ್ಧರಿಸಿ, ಅರ್ಜಿಗಳನ್ನು ವಿಲೆ ಮಾಡಲಾಗಿದೆ.

ರಿಟ್ ಅರ್ಜಿಯನ್ನು ಅಂಗೀಕರಿಸಲಾಗಿದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು* | *ಪ್ಯಾರಾಗಳಲ್ಲಿ* |
|---|---|
| *1. (2013) 8 ಎಸ್‌ಸಿಸಿ 633 ಜಗದೀಶ್ ಪ್ರಸಾದ್ ಶರ್ಮ ಮತ್ತು ಇತರರು –ವಿರುದ್ಧ– ಬಿಹಾರ ರಾಜ್ಯ ಮತ್ತು ಇತರರು* | *(ಉಲ್ಲೇ) 6* |
| *2. ಎಐಆರ್ (1985) 1 ಎಸ್‌ಸಿಸಿ 429 ಕೇರಳ ರಾಜ್ಯ ಮತ್ತು ಇತರರು –ವಿರುದ್ಧ– ಎಮ್. ಪದ್ಮನಾಭನ್ ನಾಯರ್* | *(ಉಲ್ಲೇ) 9* |

ಅರ್ಜಿದಾರರ ಪರ :ಶ್ರೀ ಎಮ್. ನಾಗಪ್ರಸನ್ನ, ಹಿರಿಯ ನ್ಯಾಯವಾದಿ ಇವರ ಪರವಾಗಿ ಶ್ರೀಮತಿ ಸುವರ್ಣ ಎಮ್.ಎಲ್. ನ್ಯಾಯವಾದಿ.

ಪ್ರತ್ಯರ್ಜಿದಾರರ ಪರ : ಶ್ರೀ ನಿತಿನ್ ರಮೇಶ್, ಸಹಾಯಕ ಸರ್ಕಾರಿ ನ್ಯಾಯವಾದಿ ಇವರ ಪರವಾಗಿ ಶ್ರೀ ಇ.ಎಸ್. ಇಂದ್ರೇಶ್, ಸಹಾಯಕ ಸರ್ಕಾರಿ ನ್ಯಾಯವಾದಿ ಪ್ರತ್ಯರ್ಜಿದಾರ 2 ಇವರ ಪರ.

ಶ್ರೀ ಸಂತೋಷ್ ಎಸ್. ನಾಗರಾಳೆ, ನ್ಯಾಯವಾದಿ ಪ್ರತ್ಯರ್ಜಿದಾರ 1 ಇವರ ಪರ.

## ಆಜ್ಞೆ

**ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್:**

ಈ ರಿಟ್ ಅರ್ಜಿಗಳಲ್ಲಿ ಹೇಳಿದ ಮೊಕದ್ದಮೆಯ ಸಂಕ್ಷಿಪ್ತ ಸಂಗತಿಯ ಮೂಲರೂಪವೆಂದರೆ, ಸಹಾಯಕ ಗ್ರಂಥಪಾಲಕರಾಗಿ ಯು.ಜಿ.ಸಿ. ವೇತನ ಶ್ರೇಣಿಗಳಲ್ಲಿ ಆಯ್ಕೆ ದರ್ಜೆ ಕೇಡರ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಜಿದಾರರು, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000ದಲ್ಲಿ ಗೊತ್ತುಪಡಿಸಲಾದ 60 ವರ್ಷಗಳ ವಯಸ್ಸು ಏನೇ ಇರಲಿ, ಯು.ಜಿ.ಸಿ. ನಿಯಮಾವಳಿಗಳ ಪ್ರಕಾರ, ಪ್ರತ್ಯರ್ಜಿದಾರ–ವಿಶ್ವವಿದ್ಯಾನಿಲಯದ ಸೇವೆಯಲ್ಲಿ 62 ವರ್ಷಗಳ ವಯಸ್ಸನ್ನು ತಲುಪುವವರೆಗೆ ಮುಂದುವರಿಯಲು ಅರ್ಹರಾಗಿದ್ದಾರೆ ಎಂಬುದಾಗಿದೆ.

2. ಅರ್ಜಿದಾರರು, ವಯೋನಿವೃತ್ತಿ ಆಧಾರದ ಮೇಲೆ ನಿವೃತ್ತಿಯ ಹೆಚ್ಚಿನ ವಯಸ್ಸನ್ನು ಕ್ಲೇಮು ಮಾಡುವುದಕ್ಕೆ ಸಮರ್ಥನೆಯಾಗಿ, ರಿಟ್ ಅರ್ಜಿಯೊಂದಿಗೆ ಲಗತ್ತಿಸಲಾದ ಅನುಬಂಧ–ಸಿ ಯಲ್ಲಿ ಹಾಜರುಪಡಿಸಿದ ದಿನಾಂಕ: 27.06.1998ರ ರಾಜ್ಯ ಸರ್ಕಾರಿ ಆದೇಶವನ್ನು ಅವಲಂಬಿಸಿದ್ದಾರೆ, ಅದು ಈ ಕೆಳಗಿನಂತಿದೆ:

**"ಸರ್ಕಾರಿ ಆದೇಶ ಸಂಖ್ಯೆ: ಇಡಿ 09 ಯುಇಸಿ 98,**
**ಬೆಂಗಳೂರು, ದಿನಾಂಕ: 27ನೇ ಜೂನ್ 1998**

*ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಅವುಗಳ ಘಟಕ ಕಾಲೇಜುಗಳಲ್ಲಿ, ಸರ್ಕಾರಿ ಕಾಲೇಜುಗಳಲ್ಲಿ ಮತ್ತು ಅನುದಾನಿತ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಂಥಪಾಲರನ್ನು ಶೈಕ್ಷಣಿಕ ಮತ್ತು (ರಜೆ–ರಹಿತ) ಸಿಬ್ಬಂದಿ ಎಂಬುದಾಗಿ ಪರಿಗಣಿಸಲಾಗುವುದು ಎಂದು ಸರ್ಕಾರವು ಆದೇಶಿಸಿದೆ.*

*ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು*
*ಅವರ ಹೆಸರಿನಲ್ಲಿ,*

*ಸಹಿ/–*
*ಸರ್ಕಾರದ ಅಧೀನ ಕಾರ್ಯದರ್ಶಿ,*
*ಶಿಕ್ಷಣ ಇಲಾಖೆ."*

3. ನೋಟೀಸನ್ನು ಜಾರಿ ಮಾಡಿದ ನಂತರ, ಸಂಬಂಧಪಟ್ಟ ನ್ಯಾಯವಾದಿಗಳ ಮೂಲಕ ಪ್ರತ್ಯರ್ಜಿದಾರರು ಹಾಜರಾಗಿದ್ದು, ಅವರು, ಅರ್ಜಿದಾರರು ಗ್ರಂಥಪಾಲರಾಗಿರುವುದರಿಂದ ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ಇದರ 2(12)ನೇ ಪ್ರಕರಣದ ಮೇರೆಗೆ "ಶಿಕ್ಷಕ" ಪದದ ಪರಿಭಾಷೆಯಲ್ಲಿ ಬರುವುದಿಲ್ಲ; ಅನುಬಂಧ–ಸಿ ಯಲ್ಲಿನ 1998ರ ಸರ್ಕಾರಿ ಆದೇಶವನ್ನು ಪೂರ್ವದ ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ, 1976ರ ಮೇರೆಗೆ ನೀಡಲಾಗಿದ್ದು, 2000ದ ಹೊಸ ಅಧಿನಿಯಮದ ಮೇರೆಗೆ "ಶಿಕ್ಷಕ" ಪದದ ಪರಿಭಾಷೆಯನ್ನು ವಿಸ್ತರಿಸಲು ಅದನ್ನು ಅವಲಂಬಿಸಲಾಗದು ಎಂದು ಹೇಳಿ ರಿಟ್ ಅರ್ಜಿಗಳನ್ನು ವಿರೋಧಿಸಿದ್ದಾರೆ.

4. ದಾಖಲೆಯಲ್ಲಿನ ಅರ್ಜಿದಾರರ ಪರ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿ ಶ್ರೀ ನಾಗಪ್ರಸನ್ನ ಅವರ ವಾದವನ್ನು ನಾನು ಆಲಿಸಿದ್ದೇನೆ; ವಿಶ್ವವಿದ್ಯಾನಿಲಯ ಪರ ಸ್ಥಾಯಿ ನ್ಯಾಯವಾದಿ ಮತ್ತು ಹೆಚ್ಚುವರಿ ಸರ್ಕಾರಿ ನ್ಯಾಯವಾದಿ ಇವರ ವಾದಗಳನ್ನು ಸಹ ನಾನು ಆಲಿಸಿದ್ದೇನೆ.

5. ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ಇದರ 2(12)ನೇ ಪ್ರಕರಣದ ಮೇರೆಗೆ ನೀಡಲಾದ "ಶಿಕ್ಷಕ" ಪದದ ಸಮಗ್ರ ಪರಿಭಾಷೆಯನ್ನು ಅನುಸರಿಸಿದಾಗ, ಅರ್ಜಿದಾರರನ್ನು, ಯಾವುದೇ ಊಹೆಯ ಅನ್ವಯವನ್ನು ಅವಲಂಬಿಸುವ ಮೂಲಕ, ನಿರಸನಗೊಂಡ ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ, 1976ರ ಮೇರೆಗೆ "ಶಿಕ್ಷಕ" ಪದದ ಒಟ್ಟಾರೆ ಪರಿಭಾಷೆಯ ಅಡಿಯಲ್ಲಿ ಅವರು ಬರಬಹುದಾಗಿದ್ದ ಬೋಧಕ ವರ್ಗದ ಸದಸ್ಯರೆಂದು ಕರೆಯಲಾಗುವುದಿಲ್ಲ. ಈಗ ನಿರಸನಗೊಂಡಿರುವ ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ, 1976ರ ಮೇರೆಗೆ ಹೊರಡಿಸಲಾಗಿರುವ ಮೇಲೆ ಉಲ್ಲೇಖಿಸಿದ ಅನುಬಂಧ-ಸಿ ಯಲ್ಲಿನ 1998ರ ಸರ್ಕಾರಿ ಆದೇಶದ ಪಠ್ಯ ಮತ್ತು ಸಂದರ್ಭವನ್ನು, ಹೊಸ ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000ದ ಮೇರೆಗಿನ "ಶಿಕ್ಷಕ" ಪದ ಪರಿಭಾಷೆಯ ಅರ್ಥವನ್ನು ತಿರುಚದೆ ಅರ್ಜಿದಾರರು ಅವಲಂಬಿಸಲಾಗುವುದಿಲ್ಲ.

6. ಮಾನ್ಯ ಹಿರಿಯ ನ್ಯಾಯವಾದಿ ಶ್ರೀ ನಾಗಪ್ರಸನ್ನ ಅವರ ಮುಂದಿನ ವಾದವೆಂದರೆ, ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000ದ ಮೇರೆಗಿನ "ಶಿಕ್ಷಕ" ಪರಿಭಾಷೆ ಏನೇ ಆಗಿದ್ದರೂ, ಯು.ಜಿ.ಸಿ. ವೇತನ ಶ್ರೇಣಿಗಳಲ್ಲಿ ಗ್ರಂಥಪಾಲರಾಗಿ ಕಾರ್ಯನಿರ್ವಹಿಸುತ್ತಿರುವ ಅರ್ಜಿದಾರರು, ಅವರು ಸಂಬಂಧಪಟ್ಟಿರುವ ನೌಕರರ ವರ್ಗದ ಸೇವಾ ಷರತ್ತುಗಳನ್ನು ನಿಯಂತ್ರಿಸುವ ಯು.ಜಿ.ಸಿ. ವಿನಿಯಮಗಳ ಮೇರೆಗೆ ನಿಯಮಿಸಲಾದ ಹೆಚ್ಚಿನ ನಿವೃತ್ತಿ ವಯಸ್ಸಿಗೆ ಅರ್ಹರಾಗಿದ್ದಾರೆ ಎಂಬುದಾಗಿದೆ. ***ಜಗದೀಶ್ ಪ್ರಸಾದ್ ಶರ್ಮ ಮತ್ತು ಇತರರು -ವಿರುದ್ಧ- ಬಿಹಾರ ರಾಜ್ಯ ಮತ್ತು ಇತರರು*** [1], ಮೊಕದ್ದಮೆಯಲ್ಲಿ, ಸರ್ವೋಚ್ಚ ನ್ಯಾಯಾಲಯವು ನಿರ್ಣಯಿಸಿದಂತೆ

1. (2013) 8 ಎಸ್‌ಸಿಸಿ 633

ವಿರೋಧಾಭಾಸದ ಮೊಕದ್ದಮೆಯಲ್ಲಿ, ಪ್ರತ್ಯಾಯೋಜಿತ ಶಾಸನದ ಭಾಗವಾಗಿ ಯು.ಜಿ.ಸಿ. ವಿನಿಯಮಗಳು ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ಇದರ ಮೇಲೆ ಅಧ್ಯಾರೋಹಿ ಪರಿಣಾಮ ಹೊಂದಲಾಗುವುದಿಲ್ಲ ಎಂಬ ಕಾರಣದಿಂದ ಈ ವಾದವು ಸಹ ವಿಫಲವಾಗುತ್ತದೆ. ಸದರಿ ತೀರ್ಪಿನ 69ನೇ ಕಂಡಿಕೆಯನ್ನು ಈ ಕೆಳಗಿನಂತೆ ಓದಲಾಗಿದೆ:

> *69. ರಾಜ್ಯ ಮತ್ತು ಅದರ ವಿಶ್ವವಿದ್ಯಾನಿಲಯಗಳು, ಕಾಲೇಜುಗಳು ಮತ್ತು ಇತರ ಶೈಕ್ಷಣಿಕ ಸಂಸ್ಥೆಗಳಿಗೆ, ಯೋಜನೆಯ ಅನ್ವಯತೆಗೆ ಸಂಬಂಧಿಸಿದ ಸಲ್ಲಿಸಲಾದ ನಿವೇದನೆಗಳಲ್ಲಿ, ಪ್ರತಿವಾದಿಗಳ ಪರವಾಗಿ ಮಾಡಿಕೊಂಡ ಮನವಿಗಳಲ್ಲಿ ಶಬ್ದ ಬಾಹುಳ್ಯಕ್ಕೆ ಸ್ವಲ್ಪಮಟ್ಟಿನ ಅವಕಾಶವಿದೆ. ಯು.ಜಿ.ಸಿಯಿಂದ ಅನುದಾನ ಪಡೆಯುವುದಕ್ಕಾಗಿ ಪೂರ್ವಭಾವಿ ಷರತ್ತಾಗಿ 62ರಿಂದ 65 ವರ್ಷ ವಯಸ್ಸಿನ ಶಿಕ್ಷಕರ ಅಧಿಕಾರಗಳಿಗೆ ಸಂಬಂಧಿಸಿದಂತೆ ಮಂಡಿಸಿದ ವಿಸ್ತೃತ ವಾದಗಳು, ಈ ಮೊಕದ್ದಮೆಗಳಲ್ಲಿ ಇರುವ ವಾಸ್ತವ ವಿವಾದಕ್ಕೆ ಶೀರ್ಷಿಕೆಯ ಸುಸಂಗತತೆಯನ್ನು ಹೊಂದಿರುವುದು ಕಂಡುಬರುತ್ತದೆ. ಎಂದರೆ, ವಿಶ್ವವಿದ್ಯಾನಿಲಯ ಶಿಕ್ಷಣದ ಪ್ರಗತಿ ಮತ್ತು ಸಮನ್ವಯಕ್ಕಾಗಿ ಹಾಗೂ ಬೋಧನೆ, ಪರೀಕ್ಷೆ ಮತ್ತು ಸಂಶೋಧನೆಯ ಗುಣಮಟ್ಟಗಳ ನಿರ್ಧರಣೆ ಮತ್ತು ನಿರ್ವಹಣೆಗಾಗಿ, ವಿಶ್ವವಿದ್ಯಾನಿಲಯಗಳ ಅನುದಾನ ಆಯೋಗ, 1956ರ 26ನೇ ಪ್ರಕರಣದ ಮೇರೆಗೆ ವಿನಿಯಮಗಳನ್ನು ರಚಿಸಲು ಆಯೋಗವು ಅಧಿಕಾರ ಹೊಂದಿದೆ ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಪ್ರಾಮುಖ್ಯತೆಯನ್ನು ಗಳಿಸುವ ಪ್ರಶ್ನೆಯೆಂದರೆ, ಅಂಥ ವಿನಿಯಮಗಳನ್ನು ರಚಿಸುವ ಪ್ರಕ್ರಿಯೆಯಲ್ಲಿ, ರಾಜ್ಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಸಂಪೂರ್ಣವಾಗಿ ರಾಜ್ಯಗಳ ನಿಯಂತ್ರಣದ ಅಡಿಯಲ್ಲಿರುವಂಥ ನೌಕರರ ಸೇವಾ ಷರತ್ತುಗಳನ್ನು ಆಯೋಗವು ಬದಲಾಯಿಸಬಹುದೇ? ಎಂಬುದಾಗಿದೆ."*

7. ಈ ಹಂತದಲ್ಲಿ, ಎರಡು ಕಡೆಯಿಂದ ಹಾಜರಾದ ಮಾನ್ಯ ನ್ಯಾಯವಾದಿಗಳು, ರಿಟ್ ಅರ್ಜಿ ಸಂಖ್ಯೆ: 51521/2016 ಮತ್ತು ರಿಟ್ ಅರ್ಜಿ ಸಂಖ್ಯೆ: 33239/2016ರಲ್ಲಿನ ಈರ್ವರೂ ಅರ್ಜಿದಾರರು ಮಧ್ಯಂತರ ಆದೇಶವನ್ನು ಪಡೆದು, ಅವರು 62 ವರ್ಷಗಳ ವಯಸ್ಸನ್ನು ತಲುಪಿದ ನಂತರ ಅವರು ನಿವೃತ್ತರಾಗುವವರೆಗೆ ಸೇವೆಯಲ್ಲಿ ಮುಂದುವರೆದಿದ್ದರು; ಹಾಗೆಯೇ ರಿಟ್ ಅರ್ಜಿ ಸಂಖ್ಯೆ: 13051/2016ರಲ್ಲಿನ ಅರ್ಜಿದಾರರು ಸೇವೆಯಲ್ಲಿ ಮುಂದುವರೆದಿದ್ದು, ಅಲ್ಪಾವಧಿಯಲ್ಲಿ ನಿವೃತ್ತರಾಗಲಿದ್ದಾರೆ; 60 ವರ್ಷಗಳ ವಯಸ್ಸನ್ನು ತಲುಪಿದ ನಂತರ ಅವರು ಸಲ್ಲಿಸಿದ ಸೇವೆಗಾಗಿ ಅವರಿಗೆ ವೇತನ ಸಂದಾಯ ಮಾಡಲಾಗಿದೆ ಮತ್ತು ಆದ್ದರಿಂದಾಗಿ ಇದು ಮೊಕದ್ದಮೆಯ ಆಧಾರವಾಗಿದೆ ಎಂದು ನಿವೇದಿಸಿಕೊಂಡಿದ್ದಾರೆ.

8. ಅರ್ಜಿದಾರರು 60 ವರ್ಷಗಳ ವಯಸ್ಸನ್ನು ತಲುಪಿದ ನಂತರ, ಅವರು ಸಲ್ಲಿಸಿದ ಸೇವೆಗೆ ಅವರು ಪಡೆದ ವೇತನವನ್ನು ವಸೂಲು ಮಾಡಲಾಗುವುದು ಎಂದು ಭಯಪಡಿಸಲಾಗಿದೆಯಾದ್ದರಿಂದ, ವಸೂಲು ಮಾಡಲಿರುವುದಕ್ಕೆ ಪ್ರತಿಯಾಗಿ ಸ್ವಲ್ಪಮಟ್ಟಿನ ರಕ್ಷಣೆಯನ್ನು ನೀಡಬೇಕಾಗುತ್ತದೆ ಎಂಬ ಶಂಕೆಯನ್ನು ಮಾನ್ಯ ಹಿರಿಯ ನ್ಯಾಯವಾದಿ ಶ್ರೀ ಪ್ರಸನ್ನ ಅವರು ವ್ಯಕ್ತಪಡಿಸಿದ್ದಾರೆ. ರಿಟ್ ಅರ್ಜಿಯನ್ನು ವಿರೋಧಿಸಿ ಮಾನ್ಯ ನ್ಯಾಯವಾದಿಗಳು, ಈ ಶಂಕೆಯು, ವಿರುದ್ಧದ ಕ್ರಮ ಯಾವುದಾದರೂ ಇದ್ದರೆ, ಸಲ್ಲಿಸಿದ ಸೇವೆಯಷ್ಟರಮಟ್ಟಿಗೆ ಅಂಥ ಯಾವುದೇ ವಸೂಲಿಯನ್ನು ಮಾಡಲಾಗುವುದಿಲ್ಲ ಎಂಬಷ್ಟರಮಟ್ಟಿಗೆ ಇದು ತಪ್ಪು ತಿಳುವಳಿಕೆಯಾಗಿದ್ದು, ಭಾರತ ಸಂವಿಧಾನದ 23ನೇ ಅನುಚ್ಛೇದದ ಅಡಿಯಲ್ಲಿ ಅಧಿನಿಯಮಿತಗೊಳಿಸಿದ ಬೆಗರ್ ಸಿದ್ಧಾಂತದಲ್ಲಿ ಪ್ರತಿಪಾದಿಸಲಾದ, ಎಂದರೆ ಸಂಬಳರಹಿತ ಸೇವೆಗಳನ್ನು ತೆಗೆದುಕೊಳ್ಳುವುದು ಅದಕ್ಕೆ ಧಕ್ಕೆ ತರುವಂಥದ್ದಾಗುತ್ತದೆ. ಈ ಸಂಬಂಧದಲ್ಲಿ ಅರ್ಜಿದಾರರ ದೂರಿಗೆ ಒಂದು ಅಂತ್ಯವನ್ನು ಕಾಣಿಸಬೇಕಾಗುತ್ತದೆ.

9. ಈ ರಿಟ್ ಅರ್ಜಿಗಳ ಇತ್ಯರ್ಥದ ಕಾರಣದಿಂದ, ಅರ್ಜಿದಾರರ ಸೇವಾಂತ ಲಾಭಗಳನ್ನು, 60 ವರ್ಷದವರಾಗಿ ಅವರ ನಿವೃತ್ತಿಯ ವಯಸ್ಸನ್ನು ತೆಗೆದುಕೊಳ್ಳುವುದನ್ನು ಸಹ ಇತ್ಯರ್ಥಗೊಳಿಸಲಾಗಿಲ್ಲ ಮತ್ತು ವಿಶ್ವವಿದ್ಯಾನಿಲಯವು

ಅದನ್ನು ಪರಿಹರಿಸುವುದು ಅಗತ್ಯವಾಗಿದೆ ಎಂಬುದು ಅರ್ಜಿದಾರರ ಕೊನೆಯ ವಾದವಾಗಿದೆ. ವಯೋನಿವೃತ್ತಿ ವಯಸ್ಸನ್ನು ತಲುಪಿ ಶಾಂತಿಯುತವಾಗಿ ಸೇವೆಯನ್ನು ಸಲ್ಲಿಸಿರುವ ನೌಕರರಿಗೆ ಸೇವಾಂತ ಲಾಭಗಳನ್ನು ಇತ್ಯರ್ಥ ಮಾಡುವುದನ್ನು ಅಲ್ಲಗಳೆಯಲಾಗುವುದಿಲ್ಲ ಅಥವಾ ಇತ್ಯರ್ಥದಲ್ಲಿ ವಿಳಂಬ ಮಾಡುವಂತಿಲ್ಲ. ದಾನದ ಹಣವೇನೂ ಆಗಿರದ ಪಿಂಚಣಿಯು ನಿವೃತ್ತಿ ಹೊಂದಿದವರ ಸ್ವತ್ತಾಗಿದೆ, ಮತ್ತು ಅದಕ್ಕೆ ವಿಳಂಬವಾಗಿದ್ದರೆ, ***ಕೇರಳ ರಾಜ್ಯ ಮತ್ತು ಇತರರು –ವಿರುದ್ಧ– ಎಮ್. ಪದ್ಮನಾಭನ್ ನಾಯರ್***[2] ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಇದಕ್ಕೆ ಅಸಮ್ಮತಿ ಸೂಚಿಸಬೇಕಿದೆ.

10. ಎಮ್. ಪದ್ಮನಾಭನ್ ನಾಯರ್ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪು, ವ್ಯಕ್ತಿಗಳು ಶಾಂತಿಯುತವಾಗಿ ಸೇವೆಯಿಂದ ನಿವೃತ್ತಿ ಹೊಂದಿದಾಗ, ಸೇವಾಂತ ಲಾಭಗಳ ಇತ್ಯರ್ಥದಲ್ಲಿನ ವಿಳಂಬದ ಕಾರಣದಿಂದ ಅವರನ್ನು ತೊಂದರೆಗೀಡಾಗುವಂತೆ ಮಾಡಲಾಗುತ್ತದೆ ಎಂದು ತನ್ನ ಬೇಗುದಿಯನ್ನು ತೋರಿಸುತ್ತದೆ. ದಶಕಗಳ ಹಿಂದಿನ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯಗಳು, 12ನೇ ಅನುಚ್ಛೇದದ ಅಡಿಯಲ್ಲಿ ರಾಜ್ಯದ ಪರಿಭಾಷೆಯೊಳಗೆ ಬರುವ ನೌಕರರಿಗೆ ಕಣ್ಣು ತೆರೆಸಬೇಕಾಗಿದೆ. ಸದರಿ ತೀರ್ಪಿನ 3ನೇ ಮತ್ತು 5ನೇ ಕಂಡಿಕೆಗಳನ್ನು ಈ ಮುಂದಿನಂತೆ ಓದಲಾಗಿದೆ:

> *"3. ಪ್ರಸ್ತುತ ಮೊಕದ್ದಮೆಯು, ದಿನಾಂಕ: 19.5.1973ರಂದು ನಿವೃತ್ತನಾದ ಪ್ರತಿವಾದಿಗೆ ಬರಬೇಕಾದ ಪಿಂಚಣಿ ಮತ್ತು ಗ್ರ್ಯಾಚುಯಿಟಿ ಕ್ಲೇಮುಗಳ ಇತ್ಯರ್ಥದಲ್ಲಿ ಮಾಡಿದ ಅಂಥ ಖಂಡನೀಯ ವಿಳಂಬದ ಜ್ವಲಂತ ಉದಾಹರಣೆಯಾಗಿದೆ. ಆತನು ಪಿಂಚಣಿ ಮತ್ತು ಗ್ರಾಚ್ಯುಯಿಟಿಯನ್ನು ಅಂತಿಮವಾಗಿ ದಿನಾಂಕ: 14.8.1973ರಂದು, ಆತನ ನಿವೃತ್ತಿಯ ಎಂದರೆ ಎರಡು ವರ್ಷ 3*

2. ಎಐಆರ್ (1985) 1 ಎಸ್‌ಸಿಸಿ 429

*ತಿಂಗಳುಗಳಿಗಿಂತ ಹೆಚ್ಚು ಕಾಲದ ನಂತರ ಆತನಿಗೆ ಸಂದಾಯ ಮಾಡಲಾಗಿದೆ. ಹಾಗಾಗಿ, ವಕೀಲರ ನೋಟಿಸನ್ನು ಜಾರಿ ಮಾಡಿದ ನಂತರ, ಆತನು, ವಿಳಂಬದ ಸಂದಾಯಕ್ಕಾಗಿ ಸಮಾಪ್ತಿ ನಷ್ಟಗಳ ರೂಪದಲ್ಲಿ ಮುಖ್ಯವಾಗಿ ಬಡ್ಡಿಯನ್ನು ವಸೂಲು ಮಾಡಲು ದಾವೆಯನ್ನು ಸಲ್ಲಿಸಿದ್ದಾರೆ. ಖಜಾನೆ ಸಂಹಿತೆಯ 185ನೇ ನಿಯಮದ ಮೇರೆಗೆ, ಖಜಾನೆ ಅಧಿಕಾರಿಯಿಂದ ಅಗತ್ಯ ಎಲ್.ಪಿ.ಸಿ. (ಅಂತಿಮ ವೇತನ ಪ್ರಮಾಣಪತ್ರ)ವನ್ನು ಪ್ರತಿವಾದಿಯು ಹಾಜರುಪಡಿಸಿರುವುದಿಲ್ಲ ಎಂಬ ಕಾರಣದ ಮೇಲೆ ವಿಳಂಬ ಸಂದಾಯಕ್ಕೆ ಆತನನ್ನು ಅಪೀಲುದಾರರು ದೂಷಿಸಿದ್ದಾರೆ. ಆದರೆ, 186ನೇ ನಿಯಮವನ್ನು ಓದುವುದರ ಆಧಾರದ ಮೇಲೆ, ಉಚ್ಚ ನ್ಯಾಯಾಲಯವು, ಅಂತಿಮ ವೇತನ ಪ್ರಮಾಣಪತ್ರವನ್ನು ನಿವೃತ್ತಿ ಹೊಂದುತ್ತಿರುವ ಪ್ರತಿಯೊಬ್ಬ ಸರ್ಕಾರಿ ನೌಕರನಿಗೆ ನೀಡುವುದು ಖಜಾನೆ ಅಧಿಕಾರಿಯ ಕರ್ತವ್ಯವಾಗಿದ್ದು, ಈ ಪ್ರಕರಣದಲ್ಲಿ ಸಂಬಂಧಪಟ್ಟ ಅಧಿಕಾರಿಯಿಂದ ವಿಳಂಬವಾಗಿದೆ, ಅದಕ್ಕೆ ಸಂಬಂಧಿಸಿದಂತೆ ಯಾವುದೇ ಸಮರ್ಥನೆ ಇಲ್ಲ ಅಥವಾ ವಿವರಣೆಯನ್ನು ನೀಡಲಾಗಿಲ್ಲ ಎಂದು ನಿರ್ಣಯಿಸಿದ್ದು, ನಮ್ಮ ಅಭಿಪ್ರಾಯವೂ ಅದೇ ಆಗಿದೆ. ಆದುದರಿಂದ ಬಡ್ಡಿಗಾಗಿ ಮಾಡಿದ ಕ್ಲೇಮಿಗೆ, ಪ್ರತಿವಾದಿಯ ಪರವಾಗಿ ಡಿಕ್ರಿ ನೀಡಿರುವುದು ಸರಿಯಾದ ಕ್ರಮವಾಗಿದೆ.*

*5. ಎಲ್.ಪಿ.ಸಿ.ಯನ್ನು ನೀಡುವಲ್ಲಿ ವಿಳಂಬವೆಸಗಿದ ಜಿಲ್ಲಾ ಖಜಾನೆ ಅಧಿಕಾರಿಯು ತನ್ನ ಕರ್ತವ್ಯ ನಿರ್ವಹಣೆಯಲ್ಲಿ ತೋರಿದ ಖಂಡನೀಯ ನಿರ್ಲಕ್ಷ್ಯಕ್ಕಾಗಿ, ರಾಜ್ಯ ಸರ್ಕಾರವು ಆತನನ್ನು ಹೊಣೆಗಾರನನ್ನಾಗಿಸಿರುವುದು ಸರಿಯಾಗಿದೆಯಾದರೂ, ಸಂಬಂಧಪಟ್ಟ ಈ ಅಧಿಕಾರಿಯನ್ನು ದಾವೆಗೆ ಪ್ರತಿವಾದಿ ಪಕ್ಷಕಾರನನ್ನಾಗಿ ಮಾಡದೆ ಇರುವುದರಿಂದ, ಡಿಕ್ರಿಯ ಮೊತ್ತಕ್ಕೆ*

> *ಆತನನ್ನು ಹೊಣೆಗಾರನನ್ನಾಗಿಸಲು ನ್ಯಾಯಾಲಯಕ್ಕೆ ಸಾಧ್ಯವಾಗದೆ ಹೋಗಿದೆ. ಆದಾಗ್ಯೂ, ತಪ್ಪು ಮಾಡಿದ ಈ ಅಧಿಕಾರಿಯು, ತನ್ನ ಖಂಡನೀಯ ಲೋಪಗಳ ಮೂಲಕ ಸರ್ಕಾರಕ್ಕೆ ನಷ್ಟವನ್ನುಂಟು ಮಾಡಿರುವುದಕ್ಕಾಗಿ, ಅದರ ನಷ್ಟ ತುಂಬಿಕೊಳ್ಳಲು ಆತನಿಗೆ ನಿರ್ದೇಶಿಸಬೇಕೆ ಅಥವಾ ನಿರ್ದೇಶಿಸಬಾರದೆ ಎಂಬುದನ್ನು ಪರಿಗಣಿಸುವುದು ರಾಜ್ಯ ಸರ್ಕಾರಕ್ಕೆ ಬಿಟ್ಟ ವಿಷಯವಾಗಿದೆ. ರಾಜ್ಯ ಸರ್ಕಾರಿ ಅಧಿಕಾರಿಗಳ ಮೇಲೆ ಅಂಥ ಕ್ರಮವನ್ನು ತೆಗೆದುಕೊಂಡರೆ, ಅವರು ಸೇವೆ ಸಲ್ಲಿಸುತ್ತಿರುವ ಸರ್ಕಾರದ ಎಡೆಗೆ ಕರ್ತವ್ಯ ಪ್ರಜ್ಞೆಯನ್ನು ಹಾಗೂ ಸಾರ್ವಜನಿಕರ ಎಡೆಗೆ ಉತ್ತರದಾಯಿತ್ವದ ಪ್ರಜ್ಞೆಯನ್ನು ಸಹ ಅವರಲ್ಲಿ ಮೂಡಿಸಲು ಸಹಾಯಕವಾಗುತ್ತದೆ."*

ಮೇಲಿನ ಸಂದರ್ಭಗಳಲ್ಲಿ, ನಿವೃತ್ತಿ ವಯಸ್ಸಿಗೆ ಸಂಬಂಧಿಸಿದಂತೆ ರಿಟ್ ಅರ್ಜಿಗಳಲ್ಲಿ ಕೋರಿರುವ ಮುಖ್ಯ ಪರಿಹಾರವನ್ನು ನಿರಾಕರಿಸಲಾಗಿದೆಯಾದರೂ, ಈ ತೀರ್ಪಿನ ಪ್ರತಿ ಲಭ್ಯವಾಗುವಂತೆ ಮಾಡಿದ ದಿನಾಂಕದಿಂದ ಎರಡು ತಿಂಗಳುಗಳ ಅವಧಿಯನ್ನು ಮೀರದ ಸಮಯ ಮಿತಿಯೊಳಗೆ ಅರ್ಜಿದಾರರ ಸೇವಾಂತ ಲಾಭಗಳನ್ನು ಇತ್ಯರ್ಥಗೊಳಿಸಲು ವಿಶ್ವವಿದ್ಯಾನಿಲಯವು ಹೊಣೆಯುಳ್ಳದ್ದಾಗಿದೆ. ವಿಳಂಬಕ್ಕೆ ಎಡೆ ಮಾಡಿಕೊಟ್ಟರೆ, ತರುವಾಯದಲ್ಲಿ ಅರ್ಜಿದಾರರಿಗೆ ಸಂದಾಯ ಮಾಡಲಾಗುವ ಮೊತ್ತದ ಮೇಲೆ ಮಾಸಿಕ ಶೇಕಡ 2ರ ದರದಲ್ಲಿ ಬಡ್ಡಿಯೊಂದಿಗೆ ಹಣ ಸಂದಾಯ ಮಾಡಲು ಪ್ರತಿವಾದಿ–ವಿಶ್ವವಿದ್ಯಾನಿಲಯವನ್ನು ಅಗತ್ಯಪಡಿಸಲಾಗುವುದು, ಮತ್ತು ಅದನ್ನು ವಿಳಂಬಕ್ಕೆ ಹೊಣೆಗಾರನಾದ ತಪ್ಪು ಮಾಡಿದ ಅಧಿಕಾರಿಯಿಂದ ವಸೂಲು ಮಾಡಿಕೊಳ್ಳಬಹುದಾಗಿರತಕ್ಕದ್ದು.

ತದನುಸಾರ ಅರ್ಜಿಗಳನ್ನು ವಿಲೆ ಮಾಡಲಾಗಿದೆ.